ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವರು)

ಅ) ಇಲ್ಲ.

ಪ್ರಾಥಮಿಕ ಶಿಕ್ಷಣದಲ್ಲಿ ಶ್ರೀ ವೈದ್ಯನಾಥನ್ ವರದಿಯನ್ವಯ ಯೋಗ ಶಿಕ್ಷಣವು ದೈಹಿಕ ಶಿಕ್ಷಣ ಭಾಗವಾಗಿರುತ್ತದೆ. 2010 ರಲ್ಲಿಯೇ ಯೋಗದ ಪಠ್ಯಕ್ರಮ ಮತ್ತು ಪಠ್ಯವಸ್ತುವನ್ನು ಸಿದ್ಧಪಡಿಸಲಾಗಿದ್ದು, ಶಾಲೆಗಳಲ್ಲಿ 1–10 ನೇ ತರಗತಿ ಪಠ್ಯಕ್ರಮದಲ್ಲಿ ಅಳವಡಿಸಿ ಕಲಿಸಲಾಗುತ್ತಿದೆ. 6–10 ನೇ ತರಗತಿಯ ದೈಹಿಕ ಶಿಕ್ಷಣ ವಿಷಯದಲ್ಲಿ ಯೋಗ ವಿಷಯವನ್ನು ಅಳವಡಿಸಿ, ಪಠ್ಯಪುಸ್ತಕ ರಚಿಸಿ ಅದನ್ನು ಆಧರಿಸಿ ಕಲಿಕೆ ನಡೆಸಲಾಗುತ್ತಿದೆ.

ಆ) ಪ್ರಾಥಮಿಕ ಶಿಕ್ಷಣದಲ್ಲಿ ಯೋಗವನ್ನು ಈಗಾಗಲೇ ಅಳವಡಿಸಿ, 2011–12 ರಿಂದಲೇ ಜಾರಿಗೆ ತರಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಹೌದು.

ಸಂಗೀತ, ಚಿತ್ರಕಲೆ, ಮುಂತಾದ ವಿಷಯಗಳನ್ನು ಶಿಕ್ಷಣದ ಮೂಲಕ ಅಳವಡಿಸಿ ಬೋಧಿಸಲಾಗುತ್ತಿದೆ.

ಕಾಗದ ರಹಿತವಾಗಿಸುವುದು

3142 (3371); ಡಾ॥ ಸುಧಾಕರ್ ಕೆ. (ಚಿಂತಾಮಣಿ)

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಕಾಗದ ರಹಿತವಾಗಿಸಲಾಗಿದೆಯೇ? (ವಿವರ ಒದಗಿಸುವುದು);

ಆ) ರಾಜ್ಯಾದ್ಯಂತ ಇಲಾಖೆಯ ಎಲ್ಲಾ ಶಾಖೆಗಳಲ್ಲೂ ಈ ಸಾಧನೆ ಆಗಿದೆಯೇ? ಕಾಗದ ಬಳಕೆ ಮಾಡುತ್ತಿರುವ ಸ್ಥಳಗಳ ಹೆಸರುಗಳನ್ನು ತಿಳಿಸುವುದು.

ಇ) ಈ ಕಾರ್ಯಕ್ಕೆ ಇಲಾಖೆ ಮಾಡಿದ ವೆಚ್ಚ ಎಷ್ಟು? ಕಾಗದ ರಹಿತವಾಗಿದ್ದರಿಂದ ಇಲಾಖೆಗೆ ಆಗುವ ಉಳಿತಾಯವೆಷ್ಟು?

ಈ) ಇಲಾಖೆಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೆ ಎಷ್ಟು ಪ್ರಮಾಣದಲ್ಲಿ ಆಗಿದೆ? ಇಡೀ ರಾಜ್ಯವನ್ನು ಕಾಗದ ರಹಿತವಾಗಿಸಲು ಇನ್ನೆಷ್ಟು ಸಮಯಾವಕಾಶಬೇಕು?

ಉ) ಕಾಗದ ರಹಿತವಾದ ಕಾರ್ಯ ನಿರ್ವಹಣೆ ಹೇಗೆ ಸಾಧ್ಯವಾಗುತ್ತಿದೆ? (ವಿವರ ಒದಗಿಸುವುದು);

ಊ) ಯಾವುದೇ ವಿಧದ ಅರ್ಜಿ ನೀಡುವ ವ್ಯಕ್ತಿಗಳಿಗೆ ಇಲಾಖೆ ಯಾವ ಮಾದರಿಯಲ್ಲಿ ಅದರ ಸ್ವೀಕೃತಿ ದಾಖಲೆ ನೀಡುತ್ತದೆ? (ವಿವರ ನೀಡುವುದು);

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಹೌದು.

ಆ) ಜಿಲ್ಲಾ ಮಟ್ಟದಲ್ಲಿ ಸಹಾಯಕ ನಿರ್ದೇಶಕರ ಕಛೇರಿಗಳಲ್ಲಿ ಇ–ಆಫೀಸ್ ಕಾರ್ಯವ್ಯವಸ್ಥೆಯನ್ನು ಮುಂದಿನ ಹಂತದಲ್ಲಿ ಜಾರಿಗೊಳಿಸಬೇಕಾಗಿರುತ್ತದೆ. ಇದಕ್ಕಾಗಿ ಅಗತ್ಯ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಪ್ರಸಕ್ತ ಇಲಾಖೆಯ ಎಲ್ಲಾ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಗಳು ಕಾಗದ ಬಳಕೆಯ ಕಛೇರಿ ವ್ಯವಸ್ಥೆಯಲ್ಲಿಯೇ ಇವೆ.

ಇ) ಇ–ಆಫೀಸ್ ಕಾರ್ಯ ವ್ಯವಸ್ಥೆಯ ಮೂಲ ಸೌಕರ್ಯಗಳಿಗಾಗಿ ರೂ. 20.88 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.
ಇಲಾಖೆಯ ಎಲ್ಲಾ ಕಡತಗಳು ಮತ್ತು ಅವುಗಳ ನಿರ್ವಹಣೆ ಸ್ಥಳ, ಕಡತ ಚಲಾವಣೆಯ ಶ್ರಮ ಮತ್ತು ಸಿಬ್ಬಂದಿ ಮೇಲೆ ಕಡತಗಳ ನಿರ್ವಹಣೆ ಹೊರೆ, ಮಾಹಿತಿ ಹುಡುಕಾಟದ ಶ್ರಮ ಹೀಗೆ ಹತ್ತು

ಹಲವು ನಿಟ್ಟಿನಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ಅನುಕೂಲತೆಗಳಿವೆ. ಅತ್ಯಂತ ಪಾರದರ್ಶಕ ಮತ್ತು ಕಾಲಬದ್ಧ ಆಡಳಿತಕ್ಕೆ ನೇರವಾಗಿ ಕಾರಣವಾಗುತ್ತದೆ.

ಇದರಿಂದ ಸಿಬ್ಬಂದಿ ಕೊರತೆಯ ನಡುವೆಯೂ ಪರಿಣಾಮಕಾರಿಯಾಗಿ ಆಡಳಿತ ವ್ಯವಸ್ಥೆ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿದೆ.

ಈ)

1. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೇಂದ್ರ ಕಛೇರಿಯಲ್ಲಿ ಇ–ಆಫೀಸ್ ಕಾರ್ಯವ್ಯವಸ್ಥೆ ಪ್ರತಿಶತ 100 ರಷ್ಟು ಅಳವಡಿಸಲು ಶ್ರಮಿಸಲಾಗಿದೆ. ಆದಷ್ಟು ಶೀಘ್ರವಾಗಿ ಜಿಲ್ಲಾ ಹಂತಗಳಿಗೆ ಇದನ್ನು ವಿಸ್ತರಿಸಲಾಗುವುದು.
2. ಇಲಾಖೆಯಿಂದ ವಿವಿಧ ಯೋಜನೆಗಳಡಿಯಲ್ಲಿ ನೀಡಲಾಗುವ ಧನಸಹಾಯಕ್ಕಾಗಿ ಆನ್ ಲೈನ್ ಅರ್ಜಿ ಸಲ್ಲಿಕೆ ವ್ಯವಸ್ಥೆ ಕಲ್ಪಿಸಲಾಗಿದೆ.
3. ಪ್ರಾಯೋಜನೆ ಕಾರ್ಯಕ್ರಮಗಳ ಪಾವತಿಗಳನ್ನು ನೇರವಾಗಿ ಕಲಾವಿದರ ಬ್ಯಾಂಕ್ ಖಾತೆಗೆ ಮತ್ತು ವಿವಿಧ ಯೋಜನೆಗಳಡಿಯಲ್ಲಿ ಪಾವತಿಗಳನ್ನು ಸಂಘ–ಸಂಸ್ಥೆಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ/ ಆರ್.ಟಿ.ಜಿ.ಎಸ್ ಮುಖಾಂತರ ಪಾವತಿ ವ್ಯವಸ್ಥೆಯನ್ನು ರೂಪಿಸಲಾಗಿದೆ.
4. ರವೀಂದ್ರ ಕಲಾಕ್ಷೇತ್ರ, ನಯನ ಸಭಾಂಗಣ, ಕಲಾಗ್ರಾಮ, ಸಂಸ ಬಯಲು ರಂಗಮಂದಿರಗಳನ್ನು ಕಾಯ್ದಿರಿಸಲು ಆನ್ ಲೈನಿನಲ್ಲಿ ಕಾಯ್ದಿರಿಸುವ ಇ–ಬುಕ್ಕಿಂಗ್ ವ್ಯವಸ್ಥೆ ರೂಪಿಸಲಾಗಿದೆ.
5. ಇಲಾಖೆಯ ವೆಬ್ ಸೈಟ್ ಅನ್ನು ಸಂಪೂರ್ಣ ಯೂನಿಕೋಡ್ ಶಿಷ್ಟತೆಗೆ ಪರಿವರ್ತಿಸಲಾಗಿದ್ದು, ಜಗತ್ತಿನಾದ್ಯಂತ ಇರುವ ಓದುಗರು ಇದನ್ನು ಕನ್ನಡದಲ್ಲಿಯೇ ಓದಬಹುದಾಗಿರುತ್ತದೆ.
6. ವಚನ ಸಾಹಿತ್ಯದಲ್ಲಿ 249 ವಚನಕಾರರ ಸುಮಾರು 21674 ವಚನಗಳು ಮತ್ತು ದಾಸ ಸಾಹಿತ್ಯ ಕ್ಷೇತ್ರದ 139 ಕೀರ್ತನಕಾರರ

13691 ಕೀರ್ತನೆಗಳನ್ನು ಸಾರ್ವಜನಿಕ ಬಳಕೆಗೆ ಯೂನಿಕೋಡ್ ಶಿಷ್ಟತೆಯಲ್ಲಿ ಅಳವಡಿಸಿ ಒದಗಿಸಲಾಗಿದೆ.

7. ಇಲಾಖೆಯ ಪ್ರಕಟಣೆಗಳನ್ನು ನ್ಯೂಸ್ ಹಂಟ್ ಎಂಬ ಮೊಬೈಲ್ ಅಪ್ಲಿಕೇಷನ್ನಿನ ಮೂಲಕ ಸಾರ್ವಜನಿಕ ಓದಿಗೆ ಉಚಿತವಾಗಿ ಒದಗಿಸಲಾಗಿದೆ. ಇಲಾಖೆಯ ಪ್ರಕಟಣೆಗಳನ್ನು ಹಂತ ಹಂತವಾಗಿ ಅಳವಡಿಸಲಾಗುತ್ತಿದ್ದು, ಈ ವರೆಗೆ ಸುಮಾರು 1.50 ಲಕ್ಷಕ್ಕೂ ಹೆಚ್ಚು ಜನ ಓದುಗರು ಈ ಮಾಧ್ಯಮದ ಮೂಲಕ ಇಲಾಖೆಯ ಸಾಹಿತ್ಯ ಪ್ರಕಟಣೆಗಳನ್ನು ವೀಕ್ಷಣೆ ಮಾಡಿದ್ದಾರೆ.

8. ಕನ್ನಡ ಕಲಿಕೆಯ ಯೋಜನೆಯನ್ನು ವರ್ಚುವಲ್ ತರಗತಿಗಳ ಮೂಲಕ ಜಗತ್ತಿನಾದ್ಯಂತ ಇರುವ ಆಸಕ್ತರಿಗೆ ಆನ್ ಲೈನ್ ಮೂಲಕ ಕನ್ನಡ ಕಲಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

9. 'ಕಣಜ' ಕನ್ನಡ ಅಂತರ್ಜಾಲ ಮಾಹಿತಿ ವಿಶ್ವಕೋಶವನ್ನು ದಿನಾಂಕ: 01.07.2015 ರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಿರ್ವಹಿಸುತ್ತಿದ್ದು ಇದನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಆಧುನಿಕ ತಂತ್ರಜ್ಞಾನದ ಹೊಸ ಆವಿಷ್ಕಾರಗಳ ನೆರವನ್ನು ಪಡೆದು ತಜ್ಞರ ಸಹಕಾರದಿಂದ ವಿಸ್ತರಿಸಲಾಗುತ್ತಿದೆ.

10. ಜಿಲ್ಲಾ ಉತ್ಸವಗಳ ಬಗ್ಗೆ ಜಗತ್ತಿನಾದ್ಯಂತ ಇರುವ ಪ್ರವಾಸಿಗರಿಗೆ ಮತ್ತು ನಾಡಿನ ಆಸಕ್ತರಿಗೆ ಮಾಹಿತಿ ನೀಡುವ ಸಲುವಾಗಿ ಇಲಾಖೆಯ ವತಿಯಿಂದ ಆಯೋಜಿಸುವ ಉತ್ಸವಗಳ ಮಾಹಿತಿ ನೀಡುವ 'ಉತ್ಸವ್' ಮತ್ತು 'utsav' ಮೊಬೈಲ್ ಅಪ್ಲಿಕೇಷನ್ ಅನ್ನು ಸಾರ್ವಜನಿಕ ಬಳಕೆಗೆ ಉಚಿತವಾಗಿ ಒದಗಿಸಲಾಗಿದೆ.

11. ಯೂನಿಕೋಡ್ ಶಿಷ್ಟತೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ರಾಜ್ಯಾದ್ಯಂತ ಕಂಪ್ಯೂಟರ್ ವ್ಯವಸ್ಥೆಯಲ್ಲಿ ಇದ್ದ ಮಾಹಿತಿಗಳನ್ನು

ಯೂನಿಕೋಡ್ ಶಿಷ್ಟತೆಗೆ ಪರಿವರ್ತಿಸಲು ಪರಿವರ್ತಕಗಳನ್ನು ಸಿದ್ಧಪಡಿಸಿ ಉಚಿತವಾಗಿ ಸಾರ್ವಜನಿಕ ಬಳಕೆಗೆ ಒದಗಿಸಲಾಗಿದೆ.

12. ಕನ್ನಡ ಕಂಪ್ಯೂಟರ್ ಬಳಕೆದಾರರ ಅನುಕೂಲತೆಗಾಗಿ ಏಳು ವಿವಿಧ ಕನ್ನಡ ಯೂನಿಕೋಡ್ ಫಾಂಟುಗಳನ್ನು ಹಿರಿಯ ಸಾಹಿತಿಗಳ ಹೆಸರಿನಲ್ಲಿ ರೂಪಿಸಿ ಉಚಿತವಾಗಿ ಒದಗಿಸಲಾಗಿದೆ.
13. ಇಲಾಖೆಯ ಅಭಿಲೇಖಾಲಯದಲ್ಲಿರುವ ಎಲ್ಲಾ ಕಡತಗಳನ್ನು ಡಿಜಿಟಲ್ ಮಾದರಿಯಲ್ಲಿ ಸಂರಕ್ಷಿಸಿಡುವ ಪ್ರಕ್ರಿಯೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.
14. ಇಲಾಖೆಯಲ್ಲಿರುವ ಎಲ್ಲಾ ಅಪರೂಪದ ಮಾಹಿತಿ ಮತ್ತು ದಾಖಲೆಗಳನ್ನು ಡಿಜಿಟಲ್ ಮಾದರಿಯಲ್ಲಿ ಸಂರಕ್ಷಿಸಿ ಆಸಕ್ತರ ಬಳಕೆಗಾಗಿ ಒದಗಿಸಲು ಕ್ರಮ ವಹಿಸಲಾಗುತ್ತಿದೆ.

ಊ) 'ಇ–ಆಫೀಸ್' ವ್ಯವಸ್ಥೆಯು ಒಂದು ಕ್ರಾಂತಿಕಾರಕವಾದ ಸುಧಾರಣಾ ಕ್ರಮವಾಗಿದ್ದು, ಸಾರ್ವಜನಿಕರು/ಕಲಾವಿದರುಗಳು ಅನಗತ್ಯವಾಗಿ ಕಛೇರಿ ಅಲೆಯುವುದನ್ನು ತಪ್ಪಿಸಬಹುದಲ್ಲದೇ, ಇಲಾಖೆಯ ವಿವಿಧ ಯೋಜನೆಗಳನ್ನು/ಸೇವೆಗಳನ್ನು ಅತ್ಯಂತ ಪಾರಕವಾಗಿ ಮತ್ತು ಕಾಲಬದ್ಧವಾಗಿ ಒದಗಿಸಲು ಸಹಕಾರಿಯಾಗುತ್ತದೆ.

ಋ) ಆನ್ ಲೈನ್ ಅರ್ಜಿಗಳ ವ್ಯವಸ್ಥೆಯಲ್ಲಿ ಅರ್ಜಿದಾರರು ಆನ್ ಲೈನ್‌ನಲ್ಲಿಯೇ ಸ್ವೀಕೃತಿಗಳನ್ನು ಪಡೆಯಬಹುದಾಗಿದೆ.

ಇ–ಆಫೀಸ್ ವ್ಯವಸ್ಥೆಯಲ್ಲಿ ಅರ್ಜಿ ಸ್ವೀಕೃತವಾದ ನಂತರ ಅರ್ಜಿದಾರರ ಮೊಬೈಲ್ ಸಂಖ್ಯೆಗೆ ಸಂದೇಶ ರವಾನೆಯಾಗುತ್ತದೆ.

ಇ–ಮೇಲ್ ವಿಳಾಸ ಇರುವ ಅರ್ಜಿದಾರರಿಗೆ ಇ–ಅಂಚೆ ಮೂಲಕ ಸ್ವೀಕೃತಿ ಕಳುಹಿಸುವ ಸೌಲಭ್ಯವನ್ನು ರೂಪಿಸಲಾಗುತ್ತಿದೆ.